ಕಾವ್ಯಭಾಷೆಯಾಗಿಸುವುದೇ ಕಾವ್ಯೋದ್ಯೋಗ' ಎಂಬರ್ಥದ ಮಾತು – ಪರಂಪರೆಯ ಜೊತೆ ವ್ಯವಹರಿಸುವಾಗ ಆಧುನಿಕ ಸಂವೇದನೆಯ ಜವಾಬ್ದಾರಿಯನ್ನು ಈ ಮಾತು ಸೂಚಿಸುತ್ತಿದೆ ಎಂದುಕೊಂಡಿದ್ದೇನೆ.

**◆ ಈ ನೆಲದ ಮಣ್ಣಿನ ಗುಣವೇ 'ಬಹುತ್ವ'. ಆಧುನಿಕತೆ ಅಥವಾ ಆಧುನಿಕ ವ್ಯವಸ್ಥೆ ಇದನ್ನು ಅಲುಗಾಡಿಸುತ್ತಿದೆ ಅನ್ನಿಸುತ್ತದೆಯೆ?**

ಮಣ್ಣಿನ ಗುಣ ಬಹುತ್ವ ಹೌದು. ಜಮೀನನ್ನು ನೀವು ಅದರ ಪಾಡಿಗೆ ಬಿಟ್ಟುಬಿಟ್ಟರೆ ಸ್ವಲ್ಪ ಸಮಯದಲ್ಲೇ ಎಷ್ಟೊಂದು ಬಗೆಯ ಸಸಿಗಳು ಕಾಣಿಸಿಕೊಳ್ಳುತ್ತವೆ! ಎಲ್ಲಿತ್ತು ಆ ಎಲ್ಲ ಬೀಜಗಳು! ಭೂಮಿ ಹೇಗೆ ಕಾಪಿಟ್ಟುಕೊಂಡಿದೆ!

ಬಹುತ್ವ ಅಥವಾ ವೈವಿಧ್ಯ ಹೌದು. ಆದರೆ, ಅಷ್ಟೇ ಅಲ್ಲ. ತನ್ನದೇ ಸಂತತಿಯನ್ನು ಬೆಳೆಸುತ್ತ ವಿಸ್ತಾರಕ್ಕೆ ಹರಡುವುದು ಕೂಡ ಪ್ರಕೃತಿಯಲ್ಲೇ ಇದೆ. ಬೀಜದಿಂದ ಮರ, ಮರದಲ್ಲಿ ಎಷ್ಟೊಂದು ಹಣ್ಣುಗಳು, ಹಣ್ಣಿನಲ್ಲಿ ಎಷ್ಟೊಂದು ಬೀಜಗಳು! ಇದು ಯಾವುದನ್ನು ಸೂಚಿಸುತ್ತದೆ? ತನ್ನದೇ ಸಂತತಿ ವಿಸ್ತಾರಕ್ಕೆ ಹರಡುವುದೆನ್ನುವುದು ವೈವಿಧ್ಯಕ್ಕೆ ಮಾರಕವಲ್ಲವೆ? ಅದು **Mono culture** ನಂತೆ ಆಗಲಿಲ್ಲವೆ? ಅದೂ ಮಣ್ಣಿನ ಗುಣವೇ ಅಲ್ಲವೆ?

ವೈವಿಧ್ಯ ಮತ್ತು ವಿಸ್ತಾರಗೊಳ್ಳುವ ಬಯಕೆಗಳ ನಡುವೆ ಪರಸ್ಪರ ಗಮನಿಸುವ ಒಂದು 'ಹದ' ಇದೆ. 'ಹದ'ದ ಅಗತ್ಯ ಇದೆ. ಈ ಹದವೇ ಸಂಸ್ಕೃತಿ. ಪ್ರಾಚೀನರಿಗಿಂತ ಹೆಚ್ಚು ಆಧುನಿಕತೆಗೆ ಈ 'ಹದ' ಸಿಗದೇ ಹೋಗಿದೆ.

ಅಮೆರಿಕೆಯಲ್ಲಿ, ನ್ಯೂಜಿಲ್ಯಾಂಡ್‌ನಲ್ಲಿ, ಆಸ್ಟ್ರೇಲಿಯಾದಲ್ಲಿ, ಆಫ್ರಿಕಾದಲ್ಲಿ ಏನಾಗಿದೆ? ಸ್ಥಳೀಯ ಜನರ ನಿರ್ನಾಮ ನಡೆದಿದೆ. ಸ್ಥಳೀಯ ಸಂಸ್ಕೃತಿಯ ನಿರ್ನಾಮ ನಡೆದಿದೆ. ಅದರ ಮೇಲಿಂದ ಆಧುನಿಕತೆ ಬೆಳೆದಿದೆ! ಹೀಗೆ ನಡೆದುದರ ಬಗ್ಗೆ ಹೀಗಾಗಬಾರದಿತ್ತೆಂಬ ಪಶ್ಚಾತ್ತಾಪದ ಯೋಚನೆ ಕೂಡ ಆಧುನಿಕತೆಗೆ ಸುಳಿಯುವುದಿಲ್ಲ. ಹೀಗೆ ಆಧುನಿಕಗೊಂಡ ಮನಸ್ಸು ಬಹುತ್ವದ ಬಗ್ಗೆ ಕಾಳಜಿಯ ಮಾತಾಡುವ ಪ್ರಹಸನವೂ ನಡೆಯುತ್ತದೆ.

ಮತಧರ್ಮಗಳ ಕ್ಷೇತ್ರದಲ್ಲಿ ನೋಡಿ. ಎಲ್ಲರಿಗೂ ತಮ್ಮ ಧರ್ಮವು ವಿಶ್ವಧರ್ಮವೆಂಬ ನಂಬಿಕೆ. ವಿಶ್ವಧರ್ಮವಾಗಬೇಕೆಂಬ ಹಂಬಲ. ಅದನ್ನು ಸಾಧಿಸಲು ಮತಾಂತರದಂಥ ಉಪಾಯಗಳು, ಇನ್ನೂ ಏನೇನೋ ತಂತ್ರಗಳು! ವೈವಿಧ್ಯಕ್ಕೆ ಮಾರಕವಾಗಿ ಬೆಳೆಯುವುದೇ ಈ ಕಾಲದ ಸಾಧನೆಯಂತೆ ಕಾಣಿಸುತ್ತಿದೆ.

ನಮ್ಮನ್ನು ವ್ಯಾವಹಾರಿಕವಾಗಿ ಆಳುತ್ತಿರುವುದು ಮಾರುಕಟ್ಟೆ ಸಂಸ್ಕೃತಿ. ನಾವೆಲ್ಲರೂ ಮಾರುಕಟ್ಟೆಯ ಗಿರಾಕಿಗಳು ಅಷ್ಟೇ. ನಮಗೇನು ಬೇಕು ಎಂದು ತೀರ್ಮಾನಿಸುವುದೂ ಮಾರುಕಟ್ಟೆಯೆ. ಅದು ನಮಗೆ ಅಗತ್ಯ ಇದೆ ಎಂಬ ಅರಿವನ್ನುಂಟುಮಾಡುವುದೂ ಮಾರುಕಟ್ಟೆಯ ತಂತ್ರಗಳೇ. ನಮ್ಮನ್ನು ಸೆಳೆಯುವುದರಲ್ಲಿ ಧರ್ಮ ಮತ್ತು ಅರ್ಥ, ಪೈಪೋಟಿಗೆ ಇಳಿದಿವೆ. ಮತ್ತು ಒಳಗೊಳಗೆ ಕೈಜೋಡಿಸಿವೆ. ಇವೆಲ್ಲದರ ನಡುವೆ ನಾವು ನಿಜವಾಗಿ ಏನು? ಬರಿಯ ಸೂತ್ರದ ಗೊಂಬೆಗಳಂತಾಗಿ ಬಿಟ್ಟೆವೆ?

**◆ ನಿಮ್ಮ ಅಭಿವ್ಯಕ್ತಿಗಾಗಿಯೇ ಒಂದು ಹೊಸ ಸಾಹಿತ್ಯಿಕ ಭಾಷೆಯನ್ನು ಸೃಷ್ಟಿಸಿಕೊಂಡಿದ್ದೀರಿ. ಇಡೀ ಕನ್ನಡ ಸಾಹಿತ್ಯದ ಭಾಷೆಯ ಗಡಿಯನ್ನೇ ಅದು ವಿಸ್ತರಿಸಿದೆ. ಈ ಬಗ್ಗೆ ನಿಮ್ಮ ಅನುಭವಗಳೇನು?**

ಓ, ಹೌದೆ? ನಿಮ್ಮ ಅನಿಸಿಕೆಗೆ ಧನ್ಯವಾದಗಳು.

ನನ್ನ ಯೋಚನೆಯ ಧಾಟಿಯನ್ನು ನಿಮಗೆ ಹೇಳುತ್ತೇನೆ. ನಾನೊಂದು ವಸ್ತುವನ್ನು ವರ್ಣಿಸಹೊರಡುತ್ತೇನೆ ಎಂದಿಟ್ಟುಕೊಳ್ಳಿ. ಆಗ ನನ್ನ ಪ್ರಯತ್ನವೆಲ್ಲವೂ– ಅದನ್ನು ಪ್ರಯತ್ನವೆನ್ನಲಾಗದು, ತುದಿ ಮೊದಲಿಲ್ಲದ ತಳಮಳವೆನ್ನಬೇಕು– ಆ ವಸ್ತುವೇ ತನ್ನನ್ನು ಕುರಿತು ಹೇಳುವುದಿದ್ದರೆ ಆ ಮಾತುಗಳನ್ನು ನಾನು ಕೇಳಿಸಿಕೊಳ್ಳಬೇಕೆನ್ನುವುದು! ಮೊದಲನೆಯದಾಗಿ, ಆ ವಸ್ತುವಿಗೆ ತನ್ನನ್ನು ಕುರಿತು ಹೇಳುವ, ಹೇಳಬೇಕಾದ, ಅಗತ್ಯವೇ ಇಲ್ಲ. ಏನೂ ಹೇಳದೆಯೂ ಅದು ಯಾವ ಕೊರತೆಯೂ ಇಲ್ಲದಂತೆ ಇರಬಲ್ಲುದು. ಹೀಗಿರುವಾಗಲೇ ಅಂದರೆ ತನ್ನಲ್ಲಿ ತಾನಿರುವಾಗಲೇ ಅದು ಮಾತಾಡಿದರೆ ಆ ಮಾತು ಸತ್ಯ. ಆ ಮಾತು ಸಹಜ. ಆ ಮಾತು